ಹೆಚ್ಚಿಸಲು ಆದ್ಯತೆ ಮತ್ತು ಆಗತ್ಯತೆಗೆ ಅನುಗುಣವಾಗಿ ಹಂತಹಂತವಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಪರಿಶೀಲಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವ ಯೋಜಿತ ಯೋಜನೆಯ ಅಡಿಯಲ್ಲಿ ಉಳ್ಳಾಲದಲ್ಲಿನ ಪೋಲೀಸ್ ಸ್ಟೇಷನ್ನಿಗೆ ೧೫ ಜನ ಹೆಚ್ಚಿಗೆ ಪೋಲೀಸರನ್ನು ನೇಮಿಸುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಕುಶಾಲ.—ರಾಜ್ಯ ಸರ್ಕಾರೀ ನೌಕರರ ತಡವಾದ ವರ್ಗಾವಣೆಗಳನ್ನು ನಿಲ್ಲಿಸುವ ಬಗ್ಗೆ ಮಾನ್ಯ ಮಂತ್ರಿಗಳಿಂದ ವಿವರಣೆಯನ್ನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ೪ ಲಕ್ಷ ಸರ್ಕಾರೀ ನೌಕರರ ಬಗ್ಗೆ ದೊಡ್ಡ ಪ್ರಶ್ನೆಯನ್ನೇ ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

೧೮) ಬೈಂದೂರು ಕ್ಷೇತ್ರದಲ್ಲಿ ಶಿರೂರು, ಪಡುವರಿ ಯೋಜನೆಗಳನ್ನು ಬೇಗ ಪೂರೈಸಿ ಕುಡಿಯುವ ನೀರನ್ನು ಜನರಿಗೆ ಒದಗಿಸಲು ಒತ್ತಾಯ

ಶ್ರೀ ಜಿ. ಎಸ್ ಆಚಾರ್.—ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಬೈಂದೂರು ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ತುಂಬಾ ಸಮಸ್ಯೆ ಕರಾವಳಿಯಂತೆ ಗ್ರಾಮಗಳ ಬಾವಿಗಳ ನೀರು ಬೇಸಿಗೆದಂಲ್ಲಿ ಉಪ್ಪಾಗುತ್ತವೆ. ಬಾವಿ ಆಳಗೊಳಿಸಲು ಆಸಾಧ್ಯ. ಏಕೆಂದರೆ ಆಳದಲ್ಲೆಲ್ಲಾ ಅವೆಮಣ್ಣು ಸುರಕ್ಷಿತ ನೀರಿಂ ಸರಬರಾಜು ಯೋಜನೆ ಮಂಜೂರಾತಿಗೆ ಹೆಮ್ಮಾಡಿಯ ಜನರು ತೀವ್ರ ಒತ್ತಾಯ ಮಂಜೂರಾಗಿ ಅನೇಕ ವರ್ಷಗಳಾಗಿದ್ದರೂ ಆಮೆನಡಿಗೆಯಲ್ಲಿ ಕಾರ್ಯಗತವಾಗುತ್ತಿರುವ ಶಿರೂರು, ಪಡುವರಿ ಯೋಜನೆಗಳನ್ನು ಬೇಗ ಮಾಡಿಸಲು ಬೇಡಿಕೆ ಕಾಗದದಲ್ಲಿ ಮಾತ್ರ ಮಂಜೂರಾಗಿ ಒಂದು ವರ್ಷದಿಂದ ಬೋರ್ ವೆಲ್ ಜಾಗ ನಿಶ್ಚಯಿಸಲಾಗದ ಬಾವಿಯಲ್ಲಿ ಕಲ್ಲು ಬರುವ ಪಂಡ್ಸೆಯಲ್ಲಿ ಕೈಗೆ ಬಂದ ತುತ್ತು ಬಾಯಿಗೆ ಬರುತ್ತದೆಯೇ ಏಂಬ ಭಯ ಯೋಜನೆ ಕಾರ್ಯಗತವಾಗುತ್ತಿರುವ ನಾವೆಂದದಲ್ಲಿ ಊರಿನ ಎಲ್ಲಾ ಜನರಿಗೆ ಬೇಕಾಗುವ ಯೋಜನೆ ರೂಪಿಸುವ ಬಡಲು ಒಂದು ಭಾಗಕ್ಕೆ ಮಾತ್ರ ಫಲಕಾರಿಯಾಗುತ್ತಿರುವ ಬಗ್ಗೆ ಆತಂಕ. ಕುಡಿಯುವ ನೀರಿಗೆ ತತ್ವಾರವಾಗಿರುವ ಕನ್ನಡ ಕದಿರು, ಉಪ್ಪಿನ ಕುದುರು, ದೀಪಗಳ ಜನರಿಂದ ನೀರಿಗಾಗಿ ಪರದಾಟ ಪೇಚಾಟ. ನೀರು ಯೋಜನೆಗಾಗಿ ಆರ್ಜಿಗಳ ಸಾಗಾಟ. ಈ ಎಲ್ಲಾ ಬವಣೆಗಳನ್ನು ಆದಷ್ಟು ಬೇಗ ನಿವಾರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಒತ್ತಾಯಿಸುತ್ತೇನೆ

ಶ್ರೀ ಆರ್. ವಿ. ದೇಶಪಾಂಡೆ.—ಹೆಮ್ಮಾಡಿ ಗ್ರಾಮದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ೫ ಕೊಳವೆ ಬಾವಿಗಳು ಇವೆ. ಅಲ್ಲಿ ಪೈಪಡ್ ವಾಟರ್ ಸಪ್ಲೈ ಸ್ಕೀಂ ಮಾಡಬೇಕಾದರೆ ೨ ಸಾವಿರ ಜನಸಂಖ್ಯೆ ಇರಬೇಕು. ಆದರೆ ಆಲ್ಲಿ ಅಷ್ಟು ಜನಸಂಖ್ಯೆ ಇಲ್ಲದಿರುವುದರಿಂದ ಪೈಪ್ಡ್ ವಾಟರ್ ಸಪ್ಲೈ ಸ್ಕೀಂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಶಿರೂರು ವಿಭಾಗದಲ್ಲಿ ೯೧೮೩ ಜನಸಂಖ್ಯೆ ಇದೆ. ಅಲ್ಲಿಗೆ ಪೈಪ್ ವಾಟರ್ ಸಪ್ಲೈ ಸ್ಕೀಂ ಅನ್ನು ಮಂಜೂರ್ಮಾಡಿದ್ದೇವೆ. ಸುಮಾರು ೯ ಲಕ್ಷ ರೂಪಾಯೀಗಳ ಎಸ್ಟಿಮೇಟ್ ಮಾಡಿ ಕೆಲಸ ನಡೆಯುತ್ತಿದೆ ಮತ್ತು ಈ ವರ್ಷ ಈ ಕೆಲಸ ಮುಗಿಯುತ್ತದೆ. ಅದೇ ಪ್ರಕಾರ ಪಡುವರಿಯಲ್ಲಿ ೪ಲಕ್ಷದ ೬೫ ಸಾವಿರ ರೂಪಾಯಿ ಎಸ್ಟಿಮೇಟ್ ಮಾಡಿ ಯೋಜನೆಯನ್ನು ಮಂಜೂರ್ಮಾಡಿದ್ದೇವೆ. ಅದೂ ಕೂಡ ಕೆಲಸ ನಡೆಯುತ್ತಿದೆ. ಈ ವರ್ಷ ಒಂದು ಲಕ್ಷ ರೂಪಾಯೀಗಳ ಗ್ಯಾರಂಟಿನ್ನೂ ಕೊಟ್ಟಿದ್ದೇವೆ. ಈ ವರ್ಷ ಅದೂ ಮುಗಿಯುತ್ತದೆ. ಅದೇ ರೀತಿ ಇಳಕಲ್ನಲ್ಲಿ ಪೈಪ್ಡ್ ವಾಟರ್ ಸಪ್ಲೈ ಸ್ಕೀಂಗೆ ೪ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ ಈ ವರ್ಷ ಒಂದು ಲಕ್ಷದ ೪೪ ಸಾವಿರ ರೂಪಾಯಿ ಗ್ಯಾರಂಟ್ ಕೊಟ್ಟಿದ್ದೇವೆ. ಈ ವರ್ಷ ಈ ಕೆಲಸವನ್ನು ಮುಗಿಸುತ್ತೇವೆ. ನಾವೆಂದದಲ್ಲಿ ಸೆಂಟ್ರಲ್ ಸೆಕ್ಟಾರ್ ಸ್ಕೀಂನಲ್ಲಿ ತೆಗೆದುಕೊಂಡು ೭ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ ೨ ಲಕ್ಷ ರೂಪಾಯಿಗಳ ಪ್ರಾವಿಷನ್ ಮಾಡಿದ್ದೇವೆ. ಈ ಕೆಲಸ ಈ ವರ್ಷ ಮುಗಿಯುವುದಿಲ್ಲ, ಮುಂದಿನ ವರ್ಷ ಮುಗಿಯಬಹುದು. ಕನ್ನಡ ಕದಿರು ಮತ್ತು ಉಪ್ಪಿನ ಕದಿರಿನಲ್ಲಿ ರಿಗ್ಸ್ ಹೋಗುತ್ತಿಲ್ಲ. ಅಲ್ಲಿ ಸ್ಪೋ ರಿಗ್ ವ್ಯವಸ್ಥೆ ಮಾಡಿ ಬೋರ್ವೆಲ್ ಪಾಕುವ ವ್ಯವಸ್ಥೆ ಮಾಡುತ್ತಿದ್ದೇವೆ.